ಇ) ಹಾಗಿದ್ದಲ್ಲಿ ಈ ಬಸ್ ನಿಲ್ದಾಣದ ನಿರ್ಮಾಣದ ಕಾರ್ಯವನ್ನು ಇನ್ನು ಎಷ್ಟು ದಿವಸಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು)

ಅ) ಪಾಂಡವಪುರವು ರಾಷ್ಟ್ರೀಕೃತವಲ್ಲದ ವಲಯದಲ್ಲಿರುವುದರಿಂದ ಅಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವನ್ನು ಕೂಡಲೇ ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ.

ಆ) ಪಾಂಡವಪುರದಲ್ಲಿ ಪುರಸಭೆಯ ಬಸ್ ನಿಲ್ದಾಣವಿರುವುದರಿಂದಸರ್ಕಾರಿ ಸಾರ್ವಜನಿಕರಿಗೆ ಎಷ್ಟು ತೊಂದರೆಗಳಾಗುತ್ತಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ಮತ್ತು ನಾನು ಖಾಸಗಿಯಾಗಿಯೂ ಮಾತನಾಡಿದ್ದೇನೆ. ಆ ಸ್ಥಳವನ್ನು ತೆಗೆದುಕೊಳ್ಳುವುದಕ್ಕೆ ಹಣವನ್ನು ಮಂಜೂರು ಮಾಡುವಂತಹ ವ್ಯವಸ್ಥೆ ಇದೆಯೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಪಿ.ಬಿ.ಆರ್.ಸಿಂಧ್ಯ: ನಾನು ಉತ್ತರದಲ್ಲೆ ತಿಳಿಸಿದ್ದೇನೆ. ಪಾಂಡವಪುರ ರಾಷ್ಟ್ರೀಕರಣವಾದರೆ ಇರುವಂತಹ ಪ್ರದೇಶವಾಗಿರುವುದರಿಂದ ಅಲ್ಲಿ ಬಸ್ಸು ನಿಲ್ದಾಣಕ್ಕೆ ಆದ್ಯತೆಯನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೇನೆ. ಆದರೆ ಜಾಗವನ್ನು ತೆಗೆದುಕೊಂಡು ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಪುಟ್ಟಣ್ಣಯ್ಯನವರು ಒತ್ತಾಯ ಮಾಡಿದ್ದಾರೆ. ಆದುದರಿಂದ ನಾನು ಇದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ನಿಜ, ಇವತ್ತು ಅಲ್ಲಿ ಬಸ್ಸು ನಿಲ್ದಾಣವನ್ನು ಕಟ್ಟಬೇಕಾಗುತ್ತದೆ. ಅದಕ್ಕೋಸ್ಕರ ಜಾಗವನ್ನು ತೆಗೆದುಕೊಳ್ಳುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ರಾಜ್ಯದಲ್ಲಿ ತಂಡಗಳ ಘೋಷಣೆ.

109 (771) ಶ್ರೀ ರೇವೂನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಖಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ತಾಂಡಗಳನ್ನು ಗುರ್ತಿಸಲಾಗಿದೆ. (ಜಿಲ್ಲಾವಾರು ವಿವರ ನೀಡುವುದು). ಎಷ್ಟು ತಾಂಡಗಳನ್ನು ಗುರುತಿಸಲು ಸರ್ಕಾರ ಯೋಚಿಸಿದೆ?

ಆ) ಗುಲ್ಬರ್ಗಾ ಜಿಲ್ಲೆಯಲ್ಲಿ ಎಷ್ಟು ತಾಂಡಗಳನ್ನು ಗುರ್ತಿಸಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು). ಇನ್ನೂ ಎಷ್ಟು ಗುರುತಿಸಲು ಸರ್ಕಾರವು ಯೋಚಿಸಿದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು)

ಅ) 449 ತಾಂಡ: ಹ್ಯಾಮಲೆಟ್‌ಗಳನ್ನು ಗುರ್ತಿಸಿದೆ. ಜಿಲ್ಲಾವಾರು ವಿವರ ಕೆಳಕಂಡಂತಿದೆ:

1.	ಬೀದರ್	- 11
2.	ಬೆಳಗಾಂ	- 129
3.	ಬಳ್ಳಾರಿ	- 25
4.	ಬೆಂಗಳೂರು (ನಗರ)	- 12
5.	ಬೆಂಗಳೂರು (ಗ್ರಾಮಾಂತರ)	- 4
6.	ಬಿಜಾಪುರ	- 52
7.	ಚಿತ್ರದುರ್ಗ	- 20
8.	ಚಿಕ್ಕಮಗಳೂರು	- 15
9.	ಧಾರವಾಡ	- 53
10.	ಗುಲ್ಬರ್ಗಾ	- 90
11.	ಕೋಲಾರ	- 1
12.	ಮೈಸೂರು	- 11
13.	ರಾಯಚೂರು	- 7
14.	ಶಿವಮೊಗ್ಗ	- 16
15.	ತುಮಕೂರು	- 3

ಸರ್ಕಾರವು ನಿಗಧಿಪಡಿಸಿರುವ ಅಳತೆಗೋಲಿನಲ್ಲಿ ಬರುವ ಎಲ್ಲಾ ತಾಂಡ: ಹ್ಯಾಮಲೆಟ್ ಹಟ್ಟಿ ಹಾಗೂ ಮಜರೆ ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಉದ್ದೇಶಿಸಿದೆ.

ಒಟ್ಟು 90 ತಾಂಡ: ಹ್ಯಾಮ್‌ಲೆಟ್‌ಗಳನ್ನು ಗುರ್ತಿಸಿದ ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ಅ)

1.	ಅಳಂದ,	-	7
2.	ಅಪಜಲಪೂರ	-	10
3.	ಚಿತ್ತಾಪೂರ	-	9
4.	ಚಿಂದೋಳಿ	-	6
5.	ಜೇವರ್ಗಿ	-	1
6.	ಸೇಡಂ	-	7
7.	ಶೋರಾಪುರ್	-	21
8.	ಯಾದಗೀರ್	-	18
9.	ಶಹಾಪುರ್	-	6
10.	ಗುಲ್ಬರ್ಗಾ	-	5
		-	90

ಸರ್ಕಾರವು ನಿಗಧಿಪಡಿಸಿರುವ ಅಳತೆಗೋಲಿನಲ್ಲಿ ಬರುವ ಎಲ್ಲಾ ತಾಂಡ: ಹ್ಯಾಮ್‌ಲೆಟ್ ಪಟ್ಟಿ ಹಾಗೂ ಇತರೆ ಮಜರೆ ಗ್ರಾಮಗಳನ್ನು ಕಂದಾಯ ಗ್ರಾಮವಾಗಿ ಪರಿವರ್ತಿಸಲು ಉದ್ದೇಶಿಸಿದೆ.

ಶ್ರೀ ರೇವು ನಾಯಕ್ ಬೆಳಮಗಿ: ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಲಂಬಾಣಿ ತಾಂಡಗಳನ್ನು ಎಷ್ಟು ಕಂದಾಯ ತಾಂಡಗಳೆಂದು ಘೋಷಿಸಿದ್ದೀರಿ ಎಂದು ಕೇಳಿದ್ದೇನೆ ಆದರೆ ಅವರು ಲ್ಲಾವಾರು ವಿವರಗಳನ್ನು ಕೊಟ್ಟಿದ್ದಾರೆ. ನಮ್ಮ ಸಮಾಜದಲ್ಲಿ ನಮ್ಮ ಜನಸಂಖ್ಯೆ ಜನಗಣತಿಯ ಪ್ರಕಾರ ಇಡೀ ಜಿಲ್ಲಾವಾರು ಬಿಜಾಪುರದಲ್ಲಿ ಹೆಚ್ಚು ಇದ್ದಾರೆಂದು ತಿಳಿಸಿದ್ದೀರಿ. ಇದರ ಜೊತೆಗೆ ಬೀದರ್ ಜಿಲ್ಲೆಯಲ್ಲಿ 11 ಇದೆ ಎಂದುಹೇಳಿದ್ದೀರಿ. ಆದರೆ ಇಡೀ ನಮ್ಮ ರಾಜ್ಯದಲ್ಲಿ ಬೀದರ್, ಗುಲ್ಬರ್ಗಾ ಮತ್ತು ಬೆಳಗಾಂ ಇಲ್ಲಿ ಎಲ್ಲಾ ನಮ್ಮ ಸಮಾಜದ ಜನಸಂಖ್ಯೆ ಹೆಚ್ಚು ಇದೆ. ಆದರೆ, ಅವರು ಉತ್ತರದಲ್ಲಿ ಕೊನೆಯಲ್ಲಿ ಉದ್ದೇಶಿಸಿದೆ ಎಂದು ಹೇಳಿದ್ದಾರೆ. ನಾವು ಹೈದರಬಾದ್ ಕರ್ನಾಟಕದವರು, ಕಂದಾಯ ಮಂತ್ರಿಗಳು ಸಹ ಬಿಜಾಪುರದವರೇ ಆಗಿದ್ದಾರೆ. ಉದ್ದೇಶಿಸಿದೆ, ಮಾಡಬಹುದು ಎಂಬುದು ಬೇರೆಯಾಗುತ್ತದೆ. ಆದುದರಿಂದ ತಾವು ಇದನ್ನು ಯಾವಾಗ ಮಾಡುತ್ತೀರಿ. ಇದರ ಜೊತೆಯಲ್ಲಿ ನಮ್ಮ ಗುಲ್ಬಾರ್ಗಾ ಜಿಲ್ಲೆಯ ಬಗ್ಗೆ ತಾಲ್ಲೂಕುವಾರು ಕೇಳಿದ್ದೇನೆ. ಆದರೆ ಇಲ್ಲಿ ಆಳಂದ ತಾಲ್ಲೂಕಿನಲ್ಲಿ 7, ಅಫಜಲಪೂರ 10 ಚಿತ್ತಾಪೂರ 9, ಚಿಂಚೋಳಿ 1ಜೀವರ್ಗಿ.1 ಸೇಡಂ 7, ಶೋರಾಪುರ್ 18 ಯಾದಗೀರ್ 21, ಶಹಪುರ 6 ಎಂದು ಮಾಡಿದ್ದಾರೆ.

ಅಧ್ಯಕ್ಷರು: ಮಾನ್ಯ ರೇವು ನಾಯಕ್‌ರವರೆ ತಾವು ಉಪ ಪ್ರಶ್ನೆಯನ್ನು ಕೇಳಿ.

ಶ್ರೀ ರೇವು ನಾಯಕ್ ಬೆಳಮಗಿ: ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಇಡೀ ನಮ್ಮ ರಾಜ್ಯದಲ್ಲಿ ಚಿಂಚೋಳಿಯಲ್ಲಿ ಹೆಚ್ಚು ಜನಸಂಖ್ಯೆ ಇರುವುದು. ಅಲ್ಲಿ 6 ಮಾತ್ರ ಮಾಡಿದ್ದಾರೆ.

ಶ್ರೀ ರಮೇಶ್ ಸಿ. ಜಗಜಿಣಗಿ: ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆ ಚಿಂದೋಳಿಯಲ್ಲಿ ತಾಂಡಗಳು ಬಹಳ ಇವೆ ಎಂದು ಸದಸ್ಯರು ಹೇಳುತ್ತಿದ್ದಾರೆ. ನಾನು ನಾಳೆಯೇ ಗುಲ್ಬರ್ಗಾ ಜಿಲ್ಲಾಧಿಕಾರಿಯವರ ಸೂಚನೆಯನ್ನು ಕೊಟ್ಟು ಚಿಂಚೋಳಿ ತಾಲ್ಲೂಕಿನಲ್ಲಿ ನೂರು ಕುಟುಂಬಗಳು ಇರಬೇಕು. ಇಲ್ಲದಿದ್ದರೆ 500ಕ್ಕಿಂತಲೂ ಹೆಚ್ಚು ಜನಸಂಖ್ಯೆ ಇರುವಂತಹ ಎಷ್ಟು ತಾಂಡಗಳು ಇದೆ ಎಂಬ ಮಾಹಿತಿಯನ್ನು ತರಿಸಿಕೊಂಡು ಅದನ್ನು ರೆವಿನ್ಯೂ ವಿಲೇಜ್ ಎಂದು ಮಾಡಬೇಕಾಗುತ್ತದೆ.

ಶ್ರೀ ರೇವು ನಾಯಕ್ ಬೆಳಮಗಿ: ಬೀದರ್ ಜಿಲ್ಲೆಗೆ 11 ಮಾತ್ರ ಮಾಡಿದ್ದೀರಿ. ಅಲ್ಲಿ ಹೆಚ್ಚು ಜನರು ಇದ್ದಾರೆ. ಇದನ್ನು ಯಾವಾಗ ಮಾಡುತ್ತೀರಿ?

ಶ್ರೀ ರಮೇಶ್ ಸಿ. ಜಿಗಜಿಣಗಿ: ಈಗ ಇವರು ಇನ್ನೊಂದು ಸ್ಥಳವನ್ನು ಕೇಳುತ್ತಾರೆ. ನಾನು ಈ ಸದನದ ಗಮನಕ್ಕೆ ತರುವುದು., ಇಡೀ ರಾಜ್ಯದಲ್ಲಿ ಎಷ್ಟು ತಾಂಡಗಳು ಇದೆ. ಎಷ್ಟು ಹ್ಯಾಮಲೆಟ್ ಇದೆ, ಎಷ್ಟು ಮಜರೆ ಗ್ರಾಮಗಳು ಇದೆ ಇವೆಲ್ಲಾ ವರದಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಿ ಎಂದುಸೂಚನೆಯನ್ನು ಕೊಟ್ಟಿದ್ದೇನೆ. ಇದು ಎಷ್ಟು ಬೇಗ ಸಾಧ್ಯವಾಗುತ್ತದೆಯೊ ಅಷ್ಟು ಬೇಗ ಮಾಡಲು ನಾವು ಕ್ರಮತೆಗೆದುಕೊಂಡು ಡಿಕ್ಲೇರ್ ಮಾಡುತ್ತೇವೆ.

ಶ್ರೀಮತಿ ಬಿ.ಟಿ.ಲಲಿತಾ-ನಾಯಕ್: ಮಾನ್ಯ ಧ್ಯಕ್ಷರೆ, ತಾಂಡಗಳ ಸಂಬಂಧವಾಗಿ ಎಷ್ಟೊ ವರ್ಷಗಳಿಂದ ಹೇಳುತ್ತಾ ಬಂದಿದ್ದೇವೆ. ಆದರೂ ಕೂಡ ಸರಿಯಾದಂತಹ ಅಂಕಿಸಂಖ್ಯೆಗಳನ್ನು ತರಿಸಿಕೊಳ್ಳುವುದಿಲ್ಲವೆಂದರೆ ನಿಜವಾಗಲೂ ಇದರ ಬಗ್ಗೆ ತಾತ್ಸರ ಮನೋಭಾವನೆ ಇದೆ ಎಂದು ನಾನು ಭಾವಿಸುತ್ತೇನೆ. ಎಷ್ಟು ದಿವಸದಿಂದ ನಾವು 500 ಜನರು ಆಥವಾ 300 ಜನರು ಇರತಕ್ಕ ಮನೆಗಳನ್ನು ಗುರುತಿಸಿ ಅವುಗಳಿನ್ನು ರೆವಿನ್ಯೂ ಗ್ರಾಮಗಳಿಂದು ಮಾಡಬೇಕೆಂದು ಹೇಳುತ್ತಾ ಬಂದರೂ ಇಂದಿಗೂ ಮಾಡಿರುವುದಿಲ್ಲ.,

ಅಧ್ಯಕ್ಷರು: ನೀವು ಶಾಸಕಾಂಗ ಪಕ್ಷದ ಸಬೆಯಲ್ಲಿ ಗಲಾಟೆ ಮಾಡಬೇಕು.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್: ಮಾನ್ಯ ಅಧ್ಯಕ್ಷರೆ, ನಮ್ಮ ನಮ್ಮ ಕ್ಷೇತ್ರದಲ್ಲಿ ಮಾಡಬಹುದು. ಅದು ನಿಜ, ಶಾಸಕರು ಡಿ.ಸಿ ಯವರಿಗೆ ಒತ್ತಡವನ್ನು ತಂದರೆ ಇದು ಆಗುತ್ತದೆ.

ಅಧ್ಯಕ್ಷರು: ನಿಮ್ಮ ಶಾಸಕಾಂಗ ಪಕ್ಷದ ಸಬೆ ಇರುತ್ತದಲ್ಲಾ, ಜೆ.ಡಿ.ಎಸ್.ಪಿ. ಎಂದು ಅಲ್ಲಿ ನೀರು ಗಲಾಟೆ ಮಾಡಬೇಕು.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್: ಇಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಆದುದರಿಂದ ಇದನ್ನು ಮಾಡಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ: ರಾಜ್ಯದಲ್ಲಿ ಎಷ್ಟು ತಾಂಡಗಳು ಇದೆ, ಅದರ ಅಂಕಿಅಂಶಗಳು ಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಇಲ್ಲಿ ನನ್ನ ಹತ್ತಿರ ಆ ಅಂಕಿಅಂಶಗಳು ಇಲ್ಲ. ನಾಳೆ ಆಥವಾ ನಾಡಿದ್ದು ನಮ್ಮ ಇಲಾಖೆಯಲ್ಲಿ ಇದ್ದರೆ, ಅವೆಲ್ಲಾ ಅಂಕಿಅಂಶಗಳನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇದೇ ವಿಷಯವನ್ನು ಎರಡು ವರ್ಷಗಳ ಹಿಂದೆ ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಆವತ್ತು ತುಮಕೂರು ಜಿಲ್ಲೆಯಲ್ಲಿ ಕೇವಲ ಮೂರು ತಾಂಡಗಳನ್ನು ಮಾತ್ರ ಗ್ರಾಮಗಳಾಗಿ ಪರಿವರ್ತನೆ ಮಾಡಿದ್ದಾರೆನ್ನುವ ಉತ್ತರ ಕೊಡಲಾಗಿತ್ತು. ತಾಂಡಗಳು, ಹ್ಯಾಮ್‌ಲೆಟ್‌ಗಳು ಮತ್ತು ಗೊಲ್ಲರ ಹಟ್ಟಿಗಳು ಬಹುಶಃ ಒಂದೇ ರೀತಿಯ ಕಾನೂನಿನ ಅಡಿಯಲ್ಲಿ ಬರುವಂಥಾದ್ದು. ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ ಸರ್ಕಾರ ಉತ್ತರವನ್ನು ಕೊಟ್ಟಿರುವ ಪ್ರಕಾರ 160 ಬರುತ್ತದೆ. ಅದಕ್ಕೆ ನಾನು ಸಾಕಷ್ಟು ಕರೆಸ್ಪಾಂಡೆನ್ಸ್ ಮಾಡಿದ್ದೇನೆ. ಇದನ್ನು ನಾನು ಕೂಡ ನಿಯಮ 351ರ ಅಡಿಯಲ್ಲಿ ಪ್ರಸ್ತಾಪ ಮಾಡಿದಾಗ ನಮ್ಮಲ್ಲಿ ಏನಾಗಿದೆ ಎಂದರೆ ಬಂದಂತಹ ಎಲ್ಲಾ ಪ್ರಸ್ತಾವನೆಗಳನ್ನು ವಾಪಸ್ಸು ಹಾಕಿದ್ದಾರೆ. ಕಾನಸ್ಲಿಟ್ಟೆಡ್ ಆಗಿ ಪ್ರಪೋಜಲ್ ಕಳುಹಿಸಿ ಎಂದು ವಾಪಸ್ಸು ಹಾಕಿದ ಕಾರಣ ಇವತ್ತು ತುಮಕೂರಿನಲ್ಲಿ ಮೂರಕ್ಕೆ ಬಂದಿದೆ. ತುಮಕೂರಿನಲ್ಲಿ ಇರುವಷ್ಟು ತಾಂಡಗಳು, ಹ್ಯಾಮ್‌ಲೆಟ್‌ಗಳು, ಬೇರೆ ಎಲ್ಲೂ ಇಲ್ಲ ಕೇವಲ ಮೂರು ಮಾತ್ರ ಕೊಟ್ಟಿರುವಂಥಾದ್ದು ನೋಡಿದರೆ ಈ ಕಾರ್ಯಕ್ರಮ ಬಹಳ ಮಂದಗತಿಯಲ್ಲಿ ಹೋಗುತ್ತಿರುವುದೆಂದು ಕಾಣುತ್ತದೆ. ಆದುದರಿಂದ ದಯಮಾಡಿ

ಇದನ್ನು ಚುರುಕುಗೊಳಿಸಬೇಕು. ಇಂಡಿವಿಜ್ಯುಯಲ್ ಆಗಿ ಬಂದರೂ ಸಹ ಇದನ್ನು ಹಾನರ್ ಮಾಡುವಂತಹ ಆದೇಶವನ್ನು ನೀವು ಕೊಡಬೇಕೆನ್ನುವಂಥಾದ್ದು ಮತ್ತು ಕನ್ಸಾಲಿಡೇಟ್ ಆಗಿ ಒಂದೇ ಸಾರಿ ಕೊಡಿ ಎಂದರೆ ಹೇಗೆ ಸಾಧ್ಯವಾಗುತ್ತದೆ. ಆದುದರಿಂದ ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ಅದೇ ರೀತಿಯಲ್ಲಿ ಗೊಲ್ಲರ ಹಟ್ಟಿಯಲ್ಲಿ ಇವತ್ತು ಒಂದು ಸೈಟ್ ಕೊಡುವುದಕ್ಕಾಗುವುದಿಲ್ಲ ತಾಂಡಗಳಲ್ಲಿಯೂ ಕೊಡುವುದಕ್ಕಾಗುವುದಿಲ್ಲ, ಹ್ಯಾಮ್‌ಲೆಟ್‌ಗಳಲ್ಲಿ ಮೊದಲೇ ಕೊಡುವುದಕ್ಕೆ ಆಗುವುದಿಲ್ಲ. ಆದುದರಿಂದ ದಯಮಾಡಿ ಇದರ ಬಗ್ಗೆ ವಿಶೇಷವಾದ ಕಾಳಜಿಯನ್ನು ತುಮಕೂರಿನ ಪರವಾಗಿ ವಹಿಸಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ ಸಿ. ಜಿಗಜಿಣಗಿ: ತುಮಕೂರು ಜಿಲ್ಲೆಯ ಮಾಹಿತಿಯನ್ನು ತರಿಸಿ ಮಾಡಿಸಿ ಕೊಡುತ್ತೇನೆ.

ಉಡುಪಿಯಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್. ಸ್ಟಾ ್ಯಂಡ್

111 (918) ಶ್ರೀ.ಯು.ಆರ್. ಸಭಾಪತಿ (ಉಡುಪಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯಲ್ಲಿ ಕೆ.ಎಸ್.ಆರ್.ಟಿ.ಸಿ ಸ್ವಂತ ಬಸ್ ಸ್ಟಾ ್ಯಂಡ್ ಇಲ್ಲದಿರುವುದರಿಂದ ಅದರ ನಿರ್ಮಾಣಕ್ಕೆ ಖಾಸಗಿಯವರಿಂದ ಜಾಗವನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)?

ಆ) ಸ್ವಂತ ಬಸ್ ಸ್ಟಾ ್ಯಂಡಿನ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? (ವಿವರ ನೀಡುವುದು)?

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಉಡುಪಿಯಲ್ಲಿ ಯಾವ ಖಾಸಗೀ ನಿವೇಶನವೂ ಸಮಾಧಾನಕರ ಬೆಲೆಗ ಲಭ್ಯವಿಲ್ಲದ ಕಾರಣ ಕ.ರಾ.ರ.ಸಾ. ಸಂಸ್ಥೆಗೆಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸಧ್ಯಕ್ಕೆ ಸಾಧ್ಯವಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಯು.ಆರ್. ಸಭಾಪತಿ: ಮಾನ್ಯ ಅಧ್ಯಕ್ಷರೆ, ನಾನು ಕಲೆದ ಅಧಿವೇಶನದಲ್ಲಿ ಉಡುಪಿ ಕ್ಷೇತ್ರದಲ್ಲಿ ಸುಮಾರು 15 ಲಕ್ಷದಿಂದ 20 ಲಕ್ಷದವರೆಗೆ ಯಾತ್ರಾರ್ಥಿಗಳು ಬರುವುದರಿಂದ ಅಲ್ಲಿಗೆ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟಾ ್ಯಂಡ್ ಅಗತ್ಯವಿದೆ ಎಂದು ಕೇಳಿದ್ದೆ. ಇದಕ್ಕಾಗಿ 1992ರ ಅಕ್ಟೋಬರ್‌ನಲ್ಲಿ 9 ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಳ್ಳುವ ಬಗ್ಗೆ ಕೂಡ ಆದೇಶವಾಗಿತ್ತು. ಕೊನೆಯ ಗಳಿಗೆಯಲ್ಲಿ ಈ ಆದೇಶವನ್ನು ಸರ್ಕಾರ ರದ್ದು ಮಾಡಿತು. ಅದಕ್ಕಾಗಿ ನಾನು ಕರ್ನಾಟಕ ಸರ್ವೋಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆಯನ್ನು ಕೂಡ ತಂದಿದ್ದೆ. ಸರ್ಕಾರಕ್ಕೆ ಎರಡು ವರ್ಷಗಳಿಂದ ಜಾಗವನ್ನು ಹಾಗೆಯೆ ಸ್ವಾಧೀನಕ್ಕೆ ಉಳಿಸಿಕೊಂಡಿದ್ದೇವೆ. ಮಾನ್ಯ ಸಾರಿಗೆ ಸಚಿವರು ನಮಗೆ ಇದೇ ಅಧಿವೇಶನದಲ್ಲಿ ಪರಿಶೀಲನೆ ಮಾಡಿ, ಇದನ್ನು ಮಾಡೋಣವೆಂದು ಹೇಳಿದ್ದರು.